ಸಗಿಕೆ ಯಂತ್ರಿಶ್ರೀ

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1579 |
| ಸದಸ್ಯರ ಹೆಸರು | : | ಡಾ॥ ಚಂದ್ರಶೇಖರ್ ಬಿ. ಪಾಟೀಲ್ |
| ಉತ್ತರಿಸುವ ಸಚಿವರು | : | ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |
| ಉತ್ತರಿಸುವ ದಿನಾಂಕ | : | 24.09.2021 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ ಸಂ</th><th>ವೃಂದ</th><th>ಶ್ರೇಣಿ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>1</td><td rowspan="4">ಅಧಿಕಾರಿ</td><td>ದರ್ಜೆ-1(ಆಯ್ಕೆ ಶ್ರೇಣಿ)</td><td>5</td></tr>
<tr><td>2</td><td>ದರ್ಜೆ-1 (ಹಿರಿಯ)</td><td>0</td></tr>
<tr><td>3</td><td>ದರ್ಜೆ-1(ಕಿರಿಯ)</td><td>19</td></tr>
<tr><td>4</td><td>ದರ್ಜೆ-2</td><td>73</td></tr>
<tr><td>5</td><td>ಮೇಲ್ವಿಚಾರಕ</td><td>ದರ್ಜೆ-3</td><td>363</td></tr>
<tr><td>6</td><td rowspan="2">ಮೇಲ್ವಿಚಾರಕೇತರ</td><td>ದರ್ಜೆ-3</td><td>2023</td></tr>
<tr><td>7</td><td>ದರ್ಜೆ-4</td><td>24</td></tr>
<tr><td colspan="3">ಒಟ್ಟು</td><td>2507</td></tr>
</table></td></tr>
<tr><td>ಆ.</td><td>ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)</td><td>ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ಹುದ್ದೆಗಳ ವೃಂದ ನಿರ್ವಹಣೆಯನ್ನು ಕ.ಕ.ರ.ಸಾ.ನಿಗಮದಲ್ಲಿ ನಿರ್ವಹಿಸಲಾಗುತ್ತಿದ್ದು, 2019-20 ನೇ ಸಾಲಿಗೆ ಅವಶ್ಯವಿದ್ದ 925 ಚಾಲಕ ಮತ್ತು 694 ಚಾಲಕ-ಕಂ-ನಿರ್ವಾಹಕ ಒಟ್ಟು 1619 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಈಗಾಗಲೇ ಜಾಹೀರಾತು ಸಂಖ್ಯೆ 01/2020 ದಿನಾಂಕ:03-01-2020 ನ್ನು ಹೊರಡಿಸಲಾಗಿರುತ್ತದೆ. ಅದೇ ರೀತಿ ಇನ್ನೂ ಒಟ್ಟು 920 ದರ್ಜೆ-3ರ ವಿವಿಧ ವೃಂದದ ಹುದ್ದೆಗಳಾದ 693 ನಿರ್ವಾಹಕ, 26 ಸಹಾಯಕ ಸಂಚಾರ ನಿರೀಕ್ಷಕ, 106 ಕರಾಸಾ ಪೇದೆ, 06 ಸಹಾಯಕ ಭದ್ರತಾ ನಿರೀಕ್ಷಕ, 51 ಗಣಕ ಸಹಾಯಕ, 08 ಸಹಾಯಕ ಉಗ್ರಾಣ ರಕ್ಷಕ, 16 ಸಹಾಯಕ ಲೆಕ್ಕಿಗ, 08 ಅಂಕಿ ಅಂಶ ಸಹಾಯಕ, 06 ಕಿರಿಯ ಶೀಘ್ರಲಿಪಿಗಾರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿಗೆ ಕ್ರಮ ಕೈಗೊಂಡು, ಪ್ರಗತಿಯಲ್ಲಿರುವ ಸಂದರ್ಭದಲ್ಲಿಯೇ ಕೋವಿಡ್-19 ಸಾಂಕ್ರಾಮಿಕ ರೋಗವು ಹರಡಿದ್ದರ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ ಸಂ.ಆಇ 03 ಬಿಇಎಂ 2020 ದಿನಾಂಕ 06-07-2020 ರಂತೆ 2020-21 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕಲಾಗ್ ಹುದ್ದೆಗಳೂ ಸೇರಿದಂತೆ ತಡೆಹಿಡಿಯಲಾಗಿದೆ.</td></tr>
</table>

...2

| | | |
|---|---|---|
| | | ಮುಂದುವರೆದು 2021-22 ನೇ ಆರ್ಥಿಕ ವರ್ಷದಲ್ಲಿ ಈಗಾಗಲೇ ಜಾಹೀರಾತುಗೊಳಿಸಲಾದ 1619 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರೆಸಲು ಹಾಗೂ ಬಾಕಿ ಇರುವ 920 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ರಾಜ್ಯ ಮಟ್ಟದ ಅಧಿಕಾರಿ/ದರ್ಜೆ-3 ಮೇಲ್ವಿಚಾರಕ ಹುದ್ದೆಗಳ ವೃಂದ ನಿರ್ವಹಣೆಯನ್ನು ಕ.ರಾ.ರ.ಸಾ.ನಿಗಮದಲ್ಲಿ ನಿರ್ವಹಿಸುತ್ತಿದ್ದು, ಅಧಿಕಾರಿ/ ಮೇಲ್ವಿಚಾರಕ ವೃಂದದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು 460 ಹುದ್ದೆಗಳು ಖಾಲಿ ಇರುತ್ತವೆ. ಪ್ರಸ್ತುತ ಕೋವಿಡ್-19 ಹಿನ್ನಲೆಯಲ್ಲಿ ದಿನಾಂಕ: 20-05-2020ರ ನಿಗಮದ ನಿರ್ದೇಶಕ ಮಂಡಳಿಯ ತೀರ್ಮಾನದಂತೆ ಎಲ್ಲಾ ನೇರ ನೇಮಕಾತಿಗಳನ್ನು ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅಧಿಕಾರಿ/ಮೇಲ್ವಿಚಾರಕ ವೃಂದದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿಯಿರುವ ಒಟ್ಟು 460 ಹುದ್ದೆಗಳಲ್ಲಿ, ಮುಂಬಡ್ತಿಗೆ ಮೀಸಲಿರುವ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಕ.ರಾ.ರ.ಸಾ.ನಿಗಮದಿಂದ ಆದ್ಯತೆಯನುಸಾರ ತುಂಬಲು ಕ್ರಮ ಜರುಗಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 230 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು